## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 374 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23.09.2020. |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು<br>ಲೋಕೋಪಯೋಗಿ ಮತ್ತು<br>ಸಮಾಜ ಕಲ್ಯಾಣ ಇಲಾಖೆ. |

| ಕ್ರ.ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಎನ್‌ಹೆಚ್ 209 ಬೆಂಗಳೂರು–ಕನಕಪುರ ಚತುಷ್ಪಥ ರಸ್ತೆ ಕಾಮಗಾರಿಯ ವಿಳಂಬದಿಂದಾಗಿ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ವಿಳಂಬಕ್ಕೆ ಕಾರಣಗಳೇನು; | ಹೌದು. ಎನ್.ಹೆಚ್.–209 ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳುತ್ತಿದ್ದು, ಕಾಮಗಾರಿ ವಿಳಂಬದ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ಈ ಕೆಳಕಂಡಂತೆ ವರದಿ ಮಾಡಿರುತ್ತಾರೆ.<br>ಸದರಿ ವಿಳಂಬವು ಕನ್ಸೆಷನರ್‌ರವರ ಒಂದು ವರ್ಷದಿಂದ ಇರುವ ಆರ್ಥಿಕ ಬಿಕ್ಕಟ್ಟಿನಿಂದಾಗಿ ಉಂಟಾಗಿರುತ್ತದೆ. ಪ್ರಸ್ತುತ ಇದಕ್ಕಾಗಿ ಕನ್ಸೆಷನರ್‌ರವರು ಹಣವನ್ನು ಒಟ್ಟುಗೂಡಿಸಿಕೊಂಡಿದ್ದು (mobilized) ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಕಾಮಗಾರಿಯ ಒಟ್ಟು ಉದ್ದ 33.50 ಕಿಮೀ.ಗಳಿದ್ದು, ಇದರಲ್ಲಿ 08 ಕಿಮಿ.ಗಳಷ್ಟು ಕಾಮಗಾರಿ ಮುಗಿದಿದ್ದು, ಉಳಿದ ಉದ್ದವನ್ನು ಡಿಸೆಂಬರ್–2021ರಲ್ಲಿ ಮುಗಿಸಲು ಕ್ರಮ ವಹಿಸಿದೆ. |
| ಆ) | ಎನ್‌ಹೆಚ್ 209 ಬೆಂಗಳೂರು–ದಿಂಡಿಗಲ್ ರಸ್ತೆಗಾಗಿ ಒಟ್ಟು ಭೂಸ್ವಾಧೀನವಾದ ಜಮೀನು ಎಷ್ಟು; ಇದರಲ್ಲಿ ಸರ್ಕಾರಿ ಜಮೀನು ಎಷ್ಟು; ಅರಣ್ಯ ಇಲಾಖೆಯ ಜಮೀನು ಎಷ್ಟು; ಹಿಡುವಳಿ ಜಮೀನು ಎಷ್ಟು; ಹಾಗೂ ಇನ್ನೂ ಭೂಸ್ವಾಧೀನಗೊಳ್ಳದೆ/ತಕರಾರುಗಳು ಇರುವ ಜಮೀನುಗಳು ಏನಾದರೂ ಇವೆಯೇ; (ವಿವರ ನೀಡುವುದು; | ಎನ್.ಹೆಚ್.–209 ಬೆಂಗಳೂರು–ದಿಂಡಿಗಲ್ ರಸ್ತೆಗಾಗಿ ಒಟ್ಟು ಭೂಸ್ವಾಧೀನವಾದ ಜಮೀನುಗಳ ವಿವರ ಕೆಳಗಿನಂತಿದೆ:<br>1. ಒಟ್ಟು ಭೂಸ್ವಾಧೀನವಾದ ಜಮೀನು : 601.73 ಹೆಕ್ಟರ್<br>2. ಸರ್ಕಾರಿ ಜಮೀನು : 243.33 ಹೆಕ್ಟರ್<br>3. ಅರಣ್ಯ ಇಲಾಖೆ ಜಮೀನು : 12.25 ಹೆಕ್ಟರ್<br>4. ಸ್ವಾಧೀನ ಪಡೆಯಬೇಕಾದ ಜಮೀನು : 346.15 ಹೆಕ್ಟರ್<br>5. ಇನ್ನು ಭೂಸ್ವಾಧೀನಗೊಳ್ಳದೆ ತಕರಾರು ಇರುವ ಜಮೀನು – ಹಲವು ಜಮೀನುಗಳು ಆರ್ಬಿಟ್ರೇಷನ್ ಕೇಸ್‌ಗಳಿಗೆ ಒಳಪಟ್ಟಿದ್ದು, ನ್ಯಾಯಾಲಯದಲ್ಲಿರುತ್ತವೆ. ಕನ್ಸೆಷನರ್‌ಗೆ ಯೋಜನಾ ರಸ್ತೆಯ ಸಂಪೂರ್ಣ ಉದ್ದವನ್ನು ವಹಿಸಿ ಕೊಡಲಾಗಿದ್ದು, 3.6ಕಿಮೀ. ಮಾತ್ರ ವನ್ಯಜೀವಿ ಸಂರಕ್ಷಣಾ ಕಾಯ್ದೆಗೊಳಪಟ್ಟಿರುವುದರಿಂದ ಬಾಕಿಯಿರುತ್ತದೆ. ಆದ್ದರಿಂದ 3.6ಕಿಮೀ. ಉದ್ದದ ರಸ್ತೆಯನ್ನು ಗುತ್ತಿಗೆ ವ್ಯಾಪ್ತಿಯಿಂದ ಕೈಬಿಡಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ವರದಿ ನೀಡಿರುತ್ತಾರೆ. |

ಕಡತ ಸಂಖ್ಯೆ: ಲೋಇ 171 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ,
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ.